ಶ್ರೀ ಸಿ.ಟಿ.ರವಿ: ಕೊಡಗಿಗೆ ಒಂದು ಪೈಸೆನೊ ಬಿಡುಗಡೆ ಮಾಡಿಲ್ಲ ಸರ್

ಶ್ರೀ ಬಿ.ಬಿ.ನಿಂಗಯ್ಯ: ಒಂದು ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು ಮಾಡಿಕೊಡುತ್ತೇನೆ.

ಶ್ರೀ ಕೆ.ಜಿ.ಬೋಪಯ್ಯ: ದಯವಿಟ್ಟು ಅರ್ಧಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ

ಅಧ್ಯಕ್ಷರು: ಕೊಡೋಣ, ಹಾಗೆ ಮಾಡೋಣ, ಮುಂದೆಕ್ಕೆ ಹಾಕಿ ಈಗ ಬೇಡ ಬಿಡಿ, ಅರ್ಧಗಂಟೆ ಕಾಲ ಚರ್ಚೆಗೆ ಹಾಕಿ ಅವಕಾಶ ಮಾಡಿಕೊಡೋಣ

Menance of bear and Chuta

8(135) ಶ್ರೀ ವೈ ಎಸ್ ವಿ ದತ್ತಾ (ಕಡೂರು) : ಮಾನವ ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕಡೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಕರಡಿ ಮತ್ತು ಚಿರತೆಗಳ ಹಾವಳಿ ಹೆಚ್ಚಾಗಿರುವುದು ಅದರಲ್ಲಿಯೂ ಚೌಳ ಹಿರಿಯೂರು ಹೋಬಳಿ ಕಲ್ಕೆರೆಯಲ್ಲಿ ಅನೇಕ ಜನರು ಮೃತಪಟ್ಟಿರುವುದು ಹಾಗೂ ಅಂಗವಿಕಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಾದ್ದಲ್ಲಿ, ಇದುವರೆವಿಗೂ ಕರಡಿ ಮತ್ತು ಚಿರತೆಗಳ ದಾಳಿಯಿಂದ ಮೃತರಾದವರ ಮತ್ತು ಅಂಗವಿಕಲರಾದವರ ಸಂಖ್ಯೆ ಎಷ್ಟು (ವಿವರ ಗಳನ್ನು ನೀಡುವುದು)

ಇ) ಇತ್ತೀಚಿಗೆ ಕಲ್ಕೆರೆ ಗ್ರಾಮದಲ್ಲಿ ಕರಡಿಗಳ ದಾಳಿಯಿಂದ ಓರ್ವ ಮಹಿಳೆ ಮೃತಳಾಗಿದ್ದು ಅಲ್ಲಿ ಪರಿಸ್ಥಿತಿ ಗಂಭೀರವಾಗಿದ್ದು, ಈ ಪ್ರದೇಶದಲ್ಲಿ ಕರಡಿಗಳ ಸಂಖ್ಯೆ ಹತ್ತಕ್ಕೂ ಹೆಚ್ಚಿರುವುದರಿಂದ ಕರಡಿಗಳ ದಾಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಈ) ಕರಡಿ ಮತ್ತು ಚಿರತೆಗಳ ದಾಳಿಯಿಂದ ಮೃತಪಟ್ಟವರ ಮತ್ತು ಅಂಗವಿಕಲರಾದವರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು,

ಉ) ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ಪರಿಹಾರವನ್ನು ನೀಡಲಾಗಿದೆ. (ಪೂರ್ಣ ವಿವರಗಳನ್ನು ನೀಡುವುದು)?

ಶ್ರೀ ಬಿ.ರಮಾನಾಥ ರೈ (ಮಾನವ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಇದುವರೆಗೆ ಕರಡಿ ಹಾವಳಿಯಿಂದ ಮೂವರು ಮೃತಪಟ್ಟಿದ್ದು ಇಬ್ಬರು ಅಂಗವಿಕಲರಾಗಿರುತ್ತಾರೆ. ಚಿರತೆಯಿಂದ ಯಾವುದೇ ದಾಳಿ ಸಂಭವಿಸಿರುವುದಿಲ್ಲ. ಕರಡಿ ಹಾವಳಿಯಿಂದ ಮೃತಪಟ್ಟವರು ಮತ್ತು ಅಂಗವಿಕಲರಾದವರ ವಿವರ ಕೆಳಕಂಡಂತಿದೆ:

ಮೃತರಾದವರು	ಅಂಗವಿಕಲರಾದವರು
1. ಮೈಲಾರಪ್ಪ ಬಿನ್ ಮಲ್ಲಪ್ಪ, ಕಲ್ಕೆರೆ ಗ್ರಾಮ (31.10.2002)	1. ಶ್ರೀಮತಿ ಸರೋಜಮ್ಮ ಕೋಂ ದಿ:ಬಸವರಾಜಪ್ಪ (25 09.2009)
2. ಚಂದ್ರಪ್ಪ ಬಿನ್ ಪುಟ್ಟಪ್ಪ, ಚೌಳಹಿರಿಯೂರು ಗ್ರಾಮ (19.05.2006)	2. ಧರ್ಮಪ್ಪ ಬಿನ್ ನಿಂಗಪ್ಪ, ಕಲ್ಕೆರೆ ಗ್ರಾಮ (09.10.2013)
3. ತಿಮ್ಮಮ್ಮ ಕೋಂ ನಿಂಗಪ್ಪ, ಕಲ್ಕೆರೆ ಗ್ರಾಮ (31.10.2013)	

ಇ) ಕರಡಿಗಳ ಹಾವಳಿಯಾಗಿರುವ ಪ್ರದೇಶಕ್ಕೆ ಮೇಲಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿ ಹಾವಳಿಯನ್ನು ನಿಯಂತ್ರಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತಾರೆ,

1. ಸೂಕ್ತ ಸಿಬ್ಬಂದಿ ನಿಯೋಜಿಸಿ ಬೋನನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆ

2. ತೊಂದರೆ ನೀಡುವ ಕರಡಿಗಳನ್ನು ಗುರುತಿಸಿ ಹಿಡಿದು ದರೋಜಿ ಕರಡಿ ಧಾಮಕ್ಕೆ ಸ್ಥಳಾಂತರಿಸಲಾಗುತ್ತಿದೆ.

3 ಸುತ್ತಮುತ್ತಲ ಗಿಡಗಂಟಿಗಳನ್ನು ಅಂದರೆ ಬಳ್ಳಾರಿ ಜಾಲಿ ಮುಂತಾದ ಗಿಡಗಂಟಿಗಳನ್ನು ತೆಗೆದುಹಾಕಲು ಕ್ರಮ ಕೈಗೊಳ್ಳ ಲಾಗಿದೆ.

4. ವನ್ಯಜೀವಿಗಳ ದಾಳಿಯ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮ ಗಳ ಬಗ್ಗೆ ಸಾರ್ವಜನಿಕರಿಗೆ ಸೂಚನಾ ಫಲಕಗಳ ಮೂಲಕ ಹಾಗೂ ಸಭೆಯನ್ನು ನಡೆಸುವ ಮೂಲಕ ಜಾಗೃತಿಯನ್ನು ಮೂಡಿಸಲಾಗುತ್ತಿದೆ.

ಈ) ಕರಡಿ ಮತ್ತು ಚಿರತೆಗಳ ದಾಳಿಯಿಂದ ಮೃತಪಟ್ಟವರ ಮತ್ತು ಅಂಗವಿಕಲರಾದವರಿಗೆ ಘಟನೆ ನಡೆದ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ಆದೇಶಗಳನುಸಾರ ಪರಿಹಾರ ಧನ ಪಾವತಿಸಲಾಗುತ್ತಿದೆ.

ಉ) ಮೃತಪಟ್ಟವರ ವಾರಸುದಾರರಿರೆ ಘಟನೆ ಸಂಭವಿಸಿದ ಸಮಯದಲ್ಲಿ ನೀಡಿರುವ ದಯಾತ್ಮಕ ಧನದ ವಿವರ ಕೆಳಕಂಡಂತಿದೆ,

1. ಮೈಲಾರಪ್ಪ ಬಿನ್ ಮಲ್ಲ, ಕಲ್ಕೆರೆ ಗ್ರಾಮ 1 00 ಲಕ್ಷ

2. ಚಂದ್ರಪ್ಪ ಬಿನ್ ಪುಟ್ಟಪ್ಪ, ಚೌಳಹಿರಿಯೂರು ಗ್ರಾಮ 1.00 ಲಕ್ಷ

3. ತಿಮ್ಮಮ್ಮ ಕೋಂ ನಿಂಗಪ್ಪ, ಕಲ್ಕೆರೆ ಗ್ರಾಮ 2.00 ಲಕ್ಷ (ಇನ್ನುಳಿದ 3.00 ಲಕ್ಷಗಳ ಮೊತ್ತವನ್ನು ವಾರಸುದಾರರಿಗೆ ದಾಖಲಾತಿಗಳನ್ನು ಪಡೆದ ನಂತರ ಪಾವತಿಸಲಾಗುವುದು).

ಅಂಗವಿಕಲರಾದವರಿಗೆ ನೀಡಿರುವ ದಯಾತ್ಮಕ ಧನ ವಿವರ ಕೆಳಕಂಡಂತಿದೆ;

1 ಶ್ರೀಮತಿ ಸರೋಜಮ್ಮ ಕೋಂ ದಿವಂಗತ ಬಸವರಾಜಪ್ಪ, ರೂ.20,000.00

2. ಭರ್ಮಪ್ಪ ಬಿನ್ ನಿಂಗಪ್ಪ, ಕಲ್ಕೆರೆ ಗ್ರಾಮ ರೂ.5,000.00

ಶ್ರೀ ಪೈ.ಎಸ್ ವಿ.ದತ್ತಾ: ಮಾನ್ಯ ಅಧ್ಯಕ್ಷರೆ, answer to the ಏನೋ ಕೊಟ್ಟಿದ್ದಾರೆ, ಪ್ರಶ್ನೆಗೆ ಉತ್ತರವನ್ನು ಕರೆಕ್ಟ್ ಆಗಿ ಕೊಟ್ಟಿದ್ದಾರೆ, ಆದರೆ ಸುಳ್ಳು ಉತ್ತರ ಕೊಟ್ಟಿದ್ದಾರೆ, ಪ್ರಶ್ನೆಗೆ ಉತ್ತರವನ್ನು ಕರೆಕ್ಟ್ ಆಗಿ ಕೊಟ್ಟಿದ್ದಾರೆ, ಆದರೆ ಸುಳ್ಳು ಉತ್ತರ ಕೊಟ್ಟಿದ್ದಾರೆ. ಸುಳ್ಳು ಎನ್ನುವುದು un-parliamentary ಎನ್ನುವುದಾದರೆ, ಅಸತ್ಯವಾದ ವರದಿಯನ್ನು ಕೊಡಲಾಗಿಲ್ಲ, ಅಸತ್ಯವಾದ ಉತ್ತರನ್ನು ಕೊಡಲಾಗಿದೆ ಈಗಿರುವ ಪ್ರಶ್ನೆ ನನ್ನ ಕ್ಷೇತ್ರದ ಕಲ್ಕೇರೆ ಗ್ರಾಮದಲ್ಲಿ ಕಳೆದ 20 ವರ್ಷಗಳಿಂದ ಕರಡಿಗಳ ಹಾವಳಿ ಇದೆ.ಈಗ ಕಳೆದ ತಿಂಗಳು ಒಬ್ಬರು ತಿಮ್ಮಮ್ಮ ಎನ್ನುವವರು ಮೃತರಾಗಿದ್ದಾರೆ, 5 ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದಾರೆ ಸರಿ. ಕರಡಿಗಳ ದಾಳಿ ಇದೆ ಹಿಡಿಯುವುದಕ್ಕೆ ಏನು ಮಾಡುತ್ತೀರಿ ಎಂದು ನಾನು ಈಗ 15 ದಿವಸಗಳಿಂದ ಕರಡಿ ಹಿಡಿಯುವ ಕೆಲಸವನ್ನು ಎಂಎಲ್ಎ ಆಗಿ ಮಾಡುವ ಪರಿಸ್ಥಿತಿ ಬಂದುಬಿಟ್ಟಿದೆ. ನಮಗೆ ಉತ್ತರ ಏನು ಕೊಡುತ್ತಾರೆಂದರೆ, ನಾವು ಗುರುತಿಸಿ ಕರಡಿಗಳನ್ನು ಹಿಡಿದು, ದರೋಜಿ ಕರಡಿ ಧಾಮಕ್ಕೆ ಸ್ಥಳಾಂತರಿಸಲಾಗುತ್ತಿದೆ ಎಂದು ಶುದ್ಧ ಅಸತ್ಯವಾದ ಉತ್ತರವನ್ನು ಹೇಳಿದ್ದೀರಿ ನಿಮಗೆ ಜಿಲ್ಲಾ ಕೇಂದ್ರದಿಂದ ಮಾಹಿತಿ ಬಂದಿಲ್ಲ ಅರಣ್ಯ ಸಚಿವರೆ, ಮೊನ್ನೆ ದಿವಸ ನಾನು ಆ ಊರಿಗೆ ಹೋಗಿದ್ದೇನೆ, ನಿಮ್ಮ ಅರಣ್ಯ ಇಲಾಖೆಯಿಂದ ಮೂವರು ಬಂದಿದ್ದರು, ಅವರು ಊರ ಒಳಗಡೆ ಇದ್ದಾರೆ, ಊರೊಳಗೆ ಕರಡಿಗಳು ಬಂದು ಹಗಲು ಹೊತ್ತಿನಲ್ಲಿ ನಿಮ್ಮ ಅರಣ್ಯ ಇಲಾಖೆಯವರನ್ನೇ ಅಟ್ಯಾಕ್ ಮಾಡಿತು, ಅರಣ್ಯ ಇಲಾಖೆಯವರೇ ಹೆದರಿಕೊಂಡು ಓಡಿ ಹೋಗಿಬಿಟ್ಟಿದ್ದಾರೆ. ಊರ ಒಳಗಿನ ಶಾಲೆ ಹತ್ತಿರ 10–15 ಕರಡಿಗಳು ಬಂದಿದ್ದಾವೆ.

ಅಧ್ಯಕ್ಷರು: ದಯವಿಟ್ಟು, ಈ ಬಗ್ಗೆ ಚರ್ಚೆ ಮಾಡಬೇಡಿ.

ಶ್ರೀ ಎಸ್.ವಿ.ದತ್ತಾ: ಮಾನ್ಯ ಅಧ್ಯಕ್ಷರೆ, ಕರಡಿಗಳನ್ನು ಹಿಡಿಯುವ ದಕ್ಕೇನೂ ಪ್ರಯತ್ನ ಮಾಡಿಲ್ಲ. ಮುಖ್ಯವಾಗಿ, ಅಲ್ಲಿ ಒಬ್ಬರು ಸ್ವಾಮಿನಾಥನ್ ಎನ್ನುವ ಒಬ್ಬರು ವಿಜ್ಞಾನಿ ಬಂದಿದ್ದರು, ನಾನು ಆ ಪ್ರಸ್ತಾಪ ಇವರು ಉತ್ತರದಲ್ಲಿ ಬರುತ್ತದೆಂದು ತಿಳಿದುಕೊಂಡಿದ್ದೆ, ಅದನ್ನು ನೀವು ಹೇಳಿಲ್ಲ ಆ ಸ್ವಾಮಿನಾಥನ್ ಬಂದು ಮತ್ತು ಬರುವ ಗುಂಡು ಹಾರಿಸಿದ್ದರು.

ಅಧ್ಯಕ್ಷರು: ನಿಮ್ಮ ಪ್ರಶ್ನೆಗೆ ನೀವು ಹೇಳುತ್ತಿರುವುದು ಸರಿಹೋಗುತ್ತಿಲ್ಲ. ಈ ಪ್ರದೇಶದಲ್ಲಿ ಕರಡಿಗಳ ಸಂಖ್ಯೆ ಹತ್ತಕ್ಕೂ ಹೆಚ್ಚಿರುವುದರಿಂದ ಕರಡಿಗಳ ದಾಳಿಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ಎಂದು ಕೇಳಿದ್ದೀರಿ, ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ವೈ.ಎಸ್.ವಿ.ದತ್ತಾ: ಆ ಕ್ರಮಗಳನ್ನು ತೆಗೆದುಕೊಂಡಿಲ್ಲ, ಸುಳ್ಳು.

ಅಧ್ಯಕ್ಷರು : ನೇರವಾಗಿ ಅದನ್ನು ಹೇಳಿ, ಸುಳ್ಳು ಹೇಳುತ್ತಾರೆಂದು ನೇರವಾಗಿ ಹೇಳಿ.

(ಗೊಂದಲ)

ಶ್ರೀ ಎಚ್.ಡಿ.ರೇವಣ್ಣ: ಮಾನ್ಯ ಅಧ್ಯಕ್ಷರೆ, ಒಂದೆರಡು ನಿಮಿಷ ಕಾಲಾವಕಾಶ ಕೊಡಿ.

ಅಧ್ಯಕ್ಷರು: ಕಡೂರಿಗೂ ನಿಮಗೂ ಏನು ಸಂಬಂಧ. ಆ ಜಾಗ ಲೋಕಸಭೆಗೆ ಬರುತ್ತದೆ

ಶ್ರೀ ಎಚ್.ಡಿ.ರೇವಣ್ಣ: ನಮಗೆ ಚಿರತೆ ಕಾಟ ಅವರಿಗೆ ಕರಡಿ ಕಾಟ ಎರಡಕ್ಕೂಮಂತ್ರಿಗಳು ಒಂದೇ ಸಾರಿ ಉತ್ತರ ಹೇಳುವುದಕ್ಕೆ ಹೇಳಿ ಸರ್.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಕರಡಿಗಳು ನಮ್ಮ ಕ್ಷೇತ್ರದಲ್ಲೂ ಇದ್ದಾವೆ.

ಶ್ರೀ ವೈ.ಎಸ್.ವಿ.ದತ್ತಾ: ಮಾನ್ಯ ಅರಣ್ಯ ಸಚಿವರು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅವರು ಹೇಳುವ ಉತ್ತರದಲ್ಲಿ ನಾನು ಏನು ಅಪೇಕ್ಷ ಪಡುತ್ತೇನೆಂದರೆ, ಇವರು ತೆಗೆದುಕೊಂಡಿರುವ ಪ್ರಮುಖವಾದ ಕ್ರಮಗಳ ಬಗ್ಗೆ ಹೇಳಲಿಲ್ಲ. ತೆಗೆದುಕೊಳ್ಳದೇ ಇರುವ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ ಅಲ್ಲಿಗೆ ಒಬ್ಬರು ಸ್ವಾಮಿನಾಥನ್ ಎಂಬ ಸೈಂಟಿಸ್ಟ್ ಬಂದಿದ್ದರು ಅವರು ಬಂದು ನನ್ನ ಹತ್ತಿರ ಹೇಳಿದರು.

ಅಧ್ಯಕ್ಷರು: ನೀವು ಈ ಪ್ರಶ್ನೆಯಲ್ಲಿ ಅದನ್ನು ಹೇಳಿದ್ದೀರಾ? ನೀವು ಈ ವಿಷಯವನ್ನು ಪ್ರಶ್ನೆಯಲ್ಲಿ ಪ್ರಸ್ತಾಪ ಮಾಡಿದ್ದೀರಾ?

ಶ್ರೀ ವೈ.ಎಸ್.ವಿ.ದತ್ತಾ: ಕರಡಿಗಳ ದಾಳಿಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಅಧ್ಯಕ್ಷರು: ಅದನ್ನು ಅವರು ಹೇಳಿದ್ದಾರೆ. ಅವರು ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಮಾನ್ಯ ದತ್ತಾರವರು ಹಿರಿಯ ಶಾಸಕರಿದ್ದಾರೆ ನೀವೇ ಹೇಳಿರುವ ಹಾಗೆ ಎಷ್ಟೋ ವರ್ಷಗಳಿಂದ ಹೇಳಿದ್ದರೂ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು, ನನ್ನ ಮಾತನ್ನು ನೀವು ಗಮನಿಸಿದ್ದೀರಿ. ಮಾನ್ಯ ಸದಸ್ಯರಾದ ದತ್ತಾರವರು 15 ವರ್ಷಗಳಿಂದ ಈ ದಾಳಿಗಳು ನಡೆಯುತ್ತಿವೆ ಎಂದು ಹೇಳಿದ್ದಾರೆ. ಆದರೆ ಯಾರು ಕರಡಿ ದಾಳಿಯಿಂದ ಸತ್ತಿದ್ದಾರೆ ಅವರಿಗೆ ದಯಾತ್ಮಕವಾದ ಪರಿಹಾರವನ್ನು ಕೊಡಲಾಗಿದೆ. ನಾವು ಕರಡಿ ಹಿಡಿಯುವುದಕ್ಕಾಗಿ ಈಗಾಗಲೇ ಕ್ರಮ ಕೈಗೊಳ್ಳುತ್ತಿದ್ದೇವೆ. ಬೋನುಗಳನ್ನು ಸಿದ್ಧಪಡಿಸಿ ಕರಡಿ ಹಿಡಿಯತಕ್ಕಂತಹ ಕೆಲಸಕ್ಕೆ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ.

ಶ್ರೀ ವೈ.ಎಸ್.ವಿ.ದತ್ತಾ: ಏನು ಮಾಡಿಲ್ಲ.

ಶ್ರೀ ಬಿ.ರಮಾನಾಥ ರೈ: ಕೆಲವು ವರ್ಷಗಳಿಂದ ಈ ರೀತಿ ಸಮಸ್ಯೆ ಇದೆ. ಕರಡಿ ಹಿಡಿಯಬೇಕೆಂದು ಹೇಳುವಂತಹ ತಮ್ಮ ಒತ್ತಡ ಏನಿದೆ? ಅದರ ಪ್ರಕಾರ ನಾವು ಕರಡಿಗಳನ್ನು ಹಿಡಿಯುವುದಕ್ಕಾಗಿ ತುರ್ತಾಗಿ ಕಾನೂನಿನ ಸೆಕ್ಷನ್ 11 ಅನ್ನು ಉಪಯೋಗ ಮಾಡಿಕೊಂಡು ಪ್ರಯತ್ನ ಮಾಡುತ್ತಿದ್ದೇವೆ. ಕರಡಿಗಳನ್ನು ಹಿಡಿದು ದರೋಜಿ ಕರಡಿ ಗ್ರಾಮಕ್ಕೆ ಅವುಗಳನ್ನು ಹಾಕಬೇಕೆಂದು ನಾವು ತೀರ್ಮಾನ ಮಾಡಿದ್ದೇವೆ. ಅಲ್ಲಿರುವಂತಹ ಗಿಡ ಗಂಟೆಗಳನ್ನು ಕಡಿಯುವುದಕ್ಕೆ ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಕರಡಿಗಳು ಅಲ್ಲಿ ವಾಸವಾಗಲಿಕ್ಕೆ ಬೇಕಾದ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ವನ್ಯ ಜೀವಿಗಳ ದಾಳಿ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸಾರ್ವಜನಿಕ ಸೂಚನಾ ಫಲಕಗಳನ್ನು ಹಾಕಿ ಇಲ್ಲಿ ಕರಡಿಗಳು ಇವೆ, ಹಾಗಾಗಿ ಹೇಗೆ ಇರಬೇಂದು ತಿಳಿಸಿದ್ದೇವೆ.

ಅಧ್ಯಕ್ಷರು: ಕರಡಿ ಹಿಡಿಯುತ್ತೇವೆಂದು ಹೇಳಿದ್ದಾರೆ. ನಿಮಗೆ ಇನ್ನೇನು ಬೇಕಾಗಿದೆ ಹೇಳಿ.

ಶ್ರೀ ವೈ.ಎಸ್.ವಿ.ದತ್ತಾ: ಅರಣ್ಯ ಇಲಾಖೆಯ ಅಧಿಕಾರಿಗಳಿಂದ ಮಾಹಿತಿ ತೆಗೆದುಕೊಳ್ಳಿ..

ಶ್ರೀ ಬಿ.ರಮಾನಾಥ ರೈ: ದತ್ತಾರವರು ಹೇಳುತ್ತಿರುವಂತಹ ಎಲ್ಲಾ ಮಾಹಿತಿ ನನ್ನ ಬಳಿ ಇದೆ.

ಶ್ರೀ ವೈ.ಎಸ್.ವಿ.ದತ್ತಾ: ಕರಡಿಗಳನ್ನು ಹಿಡಿಯುವುದಕ್ಕಾಗಿ ಬೋನು, ಸೂಚನಾ ಫಲಕ ಹಾಕುವುದಲ್ಲ. ಅಲ್ಲಿ 10–15 ಕರಡಿಗಳು ಇವೆ. ಕೊಲ್ಲುವ ಹಾಗಿಲ್ಲ, ರೈತರು ಹಿಡಿದು ಕೊಲ್ಲುತ್ತೇವೆಂದು ಹೇಳುತ್ತಾರೆ ಕೊಲ್ಲಬೇಡಿ ಕೇಸ್ ಆಗುತ್ತದೆ ಎಂದು ನಾನು ಹೇಳಿ ಕಳುಹಿಸುತ್ತಿದ್ದೇನೆ. ಅದಕ್ಕೆ ಸ್ವಾಮಿನಾಥನ್ ಎಂಬ ಒಬ್ಬ ಸೈಂಟಿಸ್ಟ್ ಬಂದಿದ್ದರು

ಶ್ರೀ ವೈ.ಎಸ್.ವಿ.ದತ್ತಾ: ಪ್ರಾಣಿಗಳಿಗೆ ಮತ್ತಿರುವ ಗುಂಡುಗಳನ್ನು ಹೊಡೆದು ಮತ್ತು ಬರಿಸಿ ಮೂರ್ಛೆ ತಪ್ಪಿಸಿ ಬೋನಿನಲ್ಲಿ ತೆಗೆದುಕೊಂಡು ಹೋಗಬೇಕು, ಸರ್ಕಾರ ನಮಗೆ ಮತ್ತು ಬರುವ ಗುಂಡು ಹೊಡೆಯುವುದಕ್ಕೆ ಅನುಮತಿ ಕೊಟ್ಟರೆ ನಾವು ಗುಂಡು ಹೊಡೆಯುತ್ತೇವೆಂದು ಹೇಳುತ್ತಾರೆ. ಅನುಮತಿಗಾಗಿ ಈಗಾಗಲೇ ಕಾಗದಪತ್ರಗಳು ತಯಾರಾಗಿವೆ. ಅಷ್ಟರಲ್ಲಿ ಕರಡಿ ಗಳು ಇಬ್ಬರ ಮೇಲೆ ಅಟ್ಯಾಕ್ ಮಾಡಿವೆ ನಿನ್ನೇ ಅರಣ್ಯ ಇಲಾಖೆ ಸಿಬ್ಬಂದಿ ಯವರ ಮೇಲೆ ಅಟ್ಯಾಕ್ ಮಾಡಿದೆ, ಮತ್ತು ಬರುವ ಗುಂಡು ಹೊಡೆದು ಕರಡಿಗಳನ್ನು ಮೂರ್ಛೆ ತಪ್ಪಿಸಿ ಬೋನಿನಲ್ಲಿ ಹಾಕುವುದಕ್ಕೆ ನಿಮ್ಮ ಇಲಾಖೆ ಯವರು ತಕ್ಷಣ ಅನುಮತಿ ಕೊಡಬೇಕು.

(ಗೊಂದಲ)

ಅಧ್ಯಕ್ಷರು: ಇದು ಪ್ರಶ್ನೋತ್ತರ ಅಲ್ಲ ಇದು, ನೀವು ಹೀಗೆಲ್ಲ ಮಾಡಿದರೆ ಇದು ಪ್ರಶ್ನೋತ್ತರ ಆಗುವುದಿಲ್ಲ. ದತ್ತಾರವರೇ, ದಯವಿಟ್ಟು ಕುಳಿತು ಕೊಳ್ಳಿ.

ಶ್ರೀ ಬಿ.ರಮಾನಾಥ ರೈ: ನಾವು ಕ್ರಮ ಕೈಗೊಳ್ಳುತ್ತೇವೆ ವನ್ಯ ಜೀವಿಗಳನ್ನು ಹಿಡಿಯಬೇಕಾದರೆ ನಮಗೆ ಕಲಂ 12ರ ಅಡಿಯಲ್ಲಿ ಅನುಮತಿ ಕೂಡ ಬೇಕಾಗಿದೆ. ಹಾಗಾಗಿ ನಾವು ತುರ್ತಾಗಿ ಏನು ಕ್ರಮವನ್ನು ಕೈಗೊಳ್ಳಬೇಕಾಗಿದೆ ಆ ಕ್ರಮವನ್ನು ಕೈಗೊಳ್ಳುತ್ತಿದ್ದೇವೆ.

(ಗೊಂದಲ)

ಅಧ್ಯಕ್ಷರೆ: ಮಾನ್ಯ ಮಂತ್ರಿಗಳೇ, ಯಾರೋ ಸೈಂಟಿಸ್ಟ್ ಸ್ವಾಮಿನಾಥನ್ ವರು ಬಂದು ಇಂಜೆಕ್ಷನ್ ಕೊಟ್ಟು ಹೋಗಿದ್ದಾರಂತೆ, ಆ ಇಂಜೆಕ್ಷನ್ ನಿಮಗೆ ಗೊತ್ತಿದೆಯೇ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಗೌರವಾನ್ವಿತ ಸದಸ್ಯರು ಹೇಳಿರುವು ದನ್ನು ಗಮನದಲ್ಲಿಟ್ಟುಕೊಂಡು ಕರಡಿಗಳನ್ನು ಹಿಡಿಯುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನು ನಾನು ಮಾಡುತ್ತೇನೆ. ತಾವು ಕೊಟ್ಟಿರುವ ಸಲಹೆ ಯನ್ನು ಗಮನದಲ್ಲಿಟ್ಟುಕೊಂಡು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಆನೆ ತುಳಿದರೆ ಸತ್ತು ಹೋಗುತ್ತಾರೆ. ನಾನು ಅವತ್ತು ನಿಮಗೆ ರೆಪೂನ್ ಸಭೆಯಲ್ಲಿ ಹೇಳಿದ್ದೇನೆ. ಕರಡಿ ಪರಚಿದರೆ ಅವನು ಜೀವನ ಪರ್ಯಂತ ಕುರೂಪಿಯಾಗಿ ಬಾಳಬೇಕು, ನಿಮಗೆ ಅರ್ಥವಾಗುತ್ತಿಲ್ಲ. ಅಲ್ಲಿ ಕರಡಿಗಳು ಏಕೆ ಬರುತ್ತವೆ ಎಂದು ನಾನು ಬಹಳ ಸಾರಿ ಹೇಳಿದ್ದೇನೆ. ಅರಣ್ಯ ಪ್ರದೇಶದಲ್ಲಿ ಏನು ಗುಡ್ಡಗಾಡು ಪ್ರದೇಶ ಇದೆ, ಅಲ್ಲಿ ನೀರಿಲ್ಲ. ನೀರು ಇಲ್ಲದೇ ಇರುವುದರಿಂದ ನಿರು ಕುಡಿಯುವುದ ಕ್ಕೋಸ್ಕರ ಗ್ರಾಮೀಣ ಪ್ರದೇಶಗಳಲ್ಲಿ ಬೋರ್‌ವೆಲ್‌ಗಳಲ್ಲಿ ನೀರು ಕುಡಿಯು ವುದಕ್ಕೆ ಬರುತ್ತವೆ. ಇದನ್ನು ಇವರು ಅರ್ಥಮಾಡಿಕೊಳ್ಳಬೇಕು. ಬೋರ್‌ವೆಲ್ ಮುಂದೆ ಒಂದು ತೊಟ್ಟಿ ಇರುತ್ತದೆ ಆ ತೊಟ್ಟಿಯಲ್ಲಿ ಕರಡಿಗಳು ನೀರು ಕುಡಿ ಯುತ್ತಿರುತ್ತವೆ. ಇಂತಹ ಸಮಯದಲ್ಲಿ ಮನುಷ್ಯರು ಕತ್ತಲೆ ಸಮಯದಲ್ಲಿ ಗೊತ್ತಿಲ್ಲದೆ ಹೊರಗಡೆ ಹೋದಾಗ ನಮ್ಮ ಕ್ಷೇತ್ರದಲ್ಲಿ 15 ರಿಂದ 20 ಜನರಿಗೆ ಗಾಯ ಮಾಡಿವೆ. ಅವರು ಕುರೂಪಿಗಳಾಗಿದ್ದಾರೆ. ಇವರು ಕೊಡುವ ಪರಿಹಾರ

ಯಾವುದಕ್ಕೂ ಸಾಕಾಗುವುದಿಲ್ಲ. ನೀವು ಚೆಕ್ ಡ್ಯಾಂಗಳನ್ನು ಕಟ್ಟಿಸಿ ಕಾಡಿನಲ್ಲಿ ಸದಾ ನೀರು ನಿಲ್ಲುವ ಹಾಗೆ ಮಾಡಿ. ಕಾಡಿನಲ್ಲಿ ಅವುಗಳಿಗೆ ಮೇವು, ನೀರು ಕೊಡಿ ಆಗ ಅವು ನಗರಕ್ಕೆ ಬರುವುದಿಲ್ಲ. ಕುಡಿಯುವುದಕ್ಕೆ ನೀರಿಲ್ಲದೆ ತಿನ್ನುವುದಕ್ಕೆ ಮೇವು ಇಲ್ಲದೆ ವನ್ಯ ಪ್ರಾಣಿಗಳೆಲ್ಲಾ ನಗರಕ್ಕೆ ಬರುತ್ತಿವೆ. ಅದನ್ನು control ಮಾಡಿ ಮೊದಲು. ಅಲ್ಲಿ ಚೆಕ್ ಡ್ಯಾಂಗಳನ್ನು ಕಟ್ಟಿ ನೀರಿನ ವ್ಯವಸ್ಥೆ ಮಾಡಿ ನಿಮ್ಮ Forest Department ನಲ್ಲಿ ಏನು ಮಾಡುತ್ತಾರೆಂದರೆ AIDP ಯಲ್ಲಿ ಸಣ್ಣ ನೀರಾವರಿ. ಇಲಾಖೆಯಿಂದ ಚೆಕ್ ಡ್ಯಾಂ ಕಟ್ಟಿಸಿ.

ಅಧ್ಯಕ್ಷರು: ಇದು ಪ್ರಶ್ನೆಯೋ ಏನು?

ಶ್ರೀ ಬಿ.ರಮಾನಾಥ ರೈ: Practical ಆಗಿ ಸರ್ಕಾರ ಏನು ಮಾಡಬೇಕಾಗಿದೆ ಅದನ್ನು ಖಂಡಿತವಾಗಿ ಈಗ ಮಾಡುತ್ತೇವೆ. ತಾವು ಏನು ಸಲಹೆ ಕೊಟ್ಟಿದ್ದೀರಿ, ಅದರ ಬಗ್ಗೆಯೂ ನಾವು ಗಮನಹರಿಸುತ್ತೇವೆ ..

ಅಧ್ಯಕ್ಷರು: ಮಂತ್ರಿಗಳೇ ಹಾಗಲ್ಲ,

ಶ್ರೀ ಬಿ.ರಮಾನಾಥ ರೈ: ಕರಡಿ ಹಿಡಿಯುವವರಿಗೆ ನೀಡುವ ಪರಿಹಾರ ಹೆಚ್ಚಿಗೆ ಮಾಡುವುದಕ್ಕೆ ತೀರ್ಮಾನ ಮಾಡಿದ್ದೇವೆ.

ಅಧ್ಯಕ್ಷರು: ದತ್ತಾರವರೇ, ಮಂತ್ರಿಗಳೇ, ಒಂದು ನಿಮಿಷ ತಾಳಿ ಅವರು ಏನು ಕೇಳಿದರು ಎಂದರೆ, ಅಲ್ಲಿ ಕರಡಿಗಳು ಇರುವ ಕಡೆಗಳಲ್ಲಿ ನೀರಿನ ವ್ಯವಸ್ಥೆ ಇಲ್ಲ. ನೀರು ಕುಡಿಯುವುದಕ್ಕೋಸ್ಕರ ಕರಡಿಗಳು ಅರಣ್ಯ ಬಿಟ್ಟು ಹೊರ ಗಡೆ ಬರುತ್ತಿವೆ ಎನ್ನುವ ಪ್ರಶ್ನೆ ಅವರು ಹೇಳಿದರು. ಅದಕ್ಕೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ಎಂದು ಹೇಳಿ.

ಶ್ರೀ ವೈ.ಎಸ್.ವಿ ದತ್ತಾ: ಈಗ ಬಂದಿರುವ ಕರಡಿಗಳನ್ನು ಹಿಡಿಯು ವುದಕ್ಕೆ ಏನು ಮಾಡುತ್ತಾರೆ?

ಶ್ರೀ ಬಿ.ರಮಾನಾಥ ರೈ: ಕರಡಿಗಳನ್ನು ಹಿಡಿಯುವಂತಹ ಪ್ರಯತ್ನವನ್ನು ಮಾಡುತ್ತೇವೆ. ನೀರಿನ ಬಗ್ಗೆ ತಾವೇನು ಹೇಳಿದ್ದೀರಿ ಅದರ ಬಗ್ಗೆ ಕೂಡ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಅಧ್ಯಕ್ಷರು: ಕರಡಿಗಳಾಗಿರಬಹುದು, ಆನೆಗಳಾಗಿರಬಹುದು, ಎಲ್ಲಾ ಊರೊಳಗೆ ಬರುತ್ತಿವೆ. ಕೋಲಾರದಂತಹ ಊರಿಗೆ ಇವತ್ತು ಆನೆಗಳನ್ನು ಬರುವುದಕ್ಕೆ ಪ್ರಾರಂಭ ಮಾಡಿವೆ. ಕಾರಣವೇನೆಂದರೆ, ಅವುಗಳು ಇರುವಂತಹ ಪ್ರದೇಶದಲ್ಲಿ ಹುಲ್ಲು ಸಿಗುತ್ತಿಲ್ಲ, ಕುಡಿಯುವ ನೀರು ಸಿಗುತ್ತಿಲ್ಲ, ಆ ಕಾರಣಕ್ಕಾಗಿ ಹಳ್ಳಿಗಳಿಗೆ ಬರುವುದಕ್ಕೆ ಪ್ರಾರಂಭ ಮಾಡಿವೆ. ಅದನ್ನು ಸ್ವಲ್ಪ ನೋಡಿಕೊಳ್ಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ: ಸಣ್ಣ ನೀರಾವರಿಯಲ್ಲಿ AIDP ಯಲ್ಲಿ ಚೆಕ್ ಡ್ಯಾಂಗಳನ್ನು ಕಟ್ಟುತ್ತಾರೆ. ನಮ್ಮ ಕ್ಷೇತ್ರದಲ್ಲಿ 10 ಚೆಕ್ ಡ್ಯಾಮಗಳನ್ನು ಕಟ್ಟುದಕ್ಕೆ ಬಂದವರನ್ನು ಅರಣ್ಯ ಇಲಾಖೆಯವರು ವಾಪಾಸ್ ಕಳುಹಿಸಿದ್ದಾರೆ. ಅದಕ್ಕೆ ಅನುಮತಿ ಕೊಡಿಸಿ. ನೀವು ಅಷ್ಟು ಮಾಡಿ ಸಾಕು. ಆ ನೀರು ಅಲ್ಲಿ ನಿಲ್ಲುತ್ತದೆ, ಅವುಗಳು ನೀರು ಕುಡಿದುಕೊಂಡು ಅಲ್ಲಿಯೇ ಇರುತ್ತವೆ.

ಶ್ರೀ ಬಿ. ರಮಾನಾಥ ರೈ: ಪರಿಶೀಲನೆ ಮಾಡಿ ನಾವು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ

Promotion of Cotlage Industries

9(143) ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಜವಳಿ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಮತ ಕ್ಷೇತ್ರ ವ್ಯಾಪ್ತಿಯಲ್ಲಿ ಕಂಬಳಿ ತಯಾರಿಕಾ ಉದ್ಯೋಗ ಹೆಚ್ಚಿನ ರೀತಿಯಲ್ಲಿ (ಗುಡಿ ಕೈಗಾರಿಕೆ) ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಈ ಗುಡಿ ಕೈಗಾರಿಕೆಯನ್ನು ಉತ್ತೇಜಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.

ಇ) ಹಾಗಿದ್ದಲ್ಲಿ, ಸದರಿ ಕೈಗಾರಿಕಾ ನೌಕರರು ಮತ್ತು ಅವರ ಮಕ್ಕಳಿಗೆ ವಿದ್ಯಾಭ್ಯಾಸ, ಸರ್ಕಾರ ನೀಡುತ್ತಿರುವ ಸವಲತ್ತುಗಳೇನು (ವಿವರ ನೀಡುವುದು)?